SC No. 245/2023
PW.-14

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 245/2023

| | | |
|---|---|---|
| ಸಾಕ್ಷಿದಾರರ ಹೆಸರು | ಕಿರಣ್ ಅರ್ಜುನ ಹಂಪಿಹೊಳಿ | ಪ್ರಮಾಣ ವಚನ ಮಾಡಿದ ದಿನಾಂಕ: 22.09.2025 |
| ತಂದೆಯ/ಗಂಡನ ಹೆಸರು | ಅರ್ಜುನ್ | |
| ವಯಸ್ಸು | 34 ವರ್ಷ | |
| ವೃತ್ತಿ | ಸಬ್ ರಿಜಸ್ಟರ್, ಬೆಳಗಾಂ | ಪ್ರಾ.ಸಾಃ 14 |
| ವಾಸ ಸ್ಥಳ | ಬೆಳಗಾಂ | ಚಾ.ಸಾಃ 19 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ *2022* ರಿಂದ *2023* ರವರೆಗೆ ಆರಕ್ಷಕ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ *15.03.2023* ರಂದು ಪಿರ್ಯಾದುದಾರರು ಸಂಜೆ *6.30* ಗಂಟೆಗೆ ಠಾಣೆಗೆ ಹಾಜರಾಗಿ ಕೈಬರಹದಲ್ಲಿ ಕೊಟ್ಟಂತಹ ದೂರನ್ನು ಪಡೆದುಕೊಂಡು ಠಾಣಾ ಗುನ್ನಾ ನಂಬರ್ *33/2023* ಕಲಂ *307* ಐಪಿಸಿ ರೀತ್ಯ ಪ್ರಕರಣವನ್ನು ದಾಖಲು ಮಾಡಿ ಪ್ರ.ವ.ವ ವರದಿಯನ್ನು ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*3* ಎಂದು ಗುರುತಿಸಲ್ಪಟ್ಟಿದ್ದು. ಸಾಕ್ಷಿದಾರರ ಸಹಿಯನ್ನು ನಿಪಿ.*3(ಬಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವ. ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು

ನಿಪಿ.*19* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಡಿಜಿಟಲ್ ಸಹಿಯನ್ನು ನಿಪಿ. *19(ಎ)* ಎಂದು ಗುರುತಿಸಲಾಯಿತು.

ಅದೇ ದಿನ ಹೂಟಗಳ್ಳಿ ಸಂತೆ ಮಾಳದ ಮೈದಾನದಲ್ಲಿ ರಾತ್ರಿ *10.00* ಗಂಟೆ ಸುಮಾರಿಗೆ ಆರೋಪಿತನು ಓಡಾಡುತ್ತಿರುತ್ತಾನೆ ಎಂದು ಬಾದ್ಮಿದಾರರಿಂದ ಬಾದ್ಮಿ ಬಂದ ಮೇಲೆ ನಾನು , ಎ ಎಸ್ ಐ ಮಹದೇವ ಕೂಡಿ ಆ ಸ್ಥಳ ಕ್ಕೆ ಹೋಗಿ ಆರೋಪಿತನನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ *10.30* ಗಂಟೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಿ ದಸ್ತಗಿರಿ ಮಾಡಿ ಬಂಧನದ ಬಗ್ಗೆ ಆತನ ತಂದೆಗೆ ನೊಟೀಸ್ ಅನ್ನು ಕೊಟ್ಟಿತ್ತು. ಆರೋಪಿತನನ್ನು ವಿಚಾರಣೆ ಮಾಡಿ, ಸ್ವ ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಆ ಸ್ವ-ಇಚ್ಚಾ ಹೇಳಿಕೆಯಲ್ಲಿ ಆರೋಪಿತನು ಕೃತ್ಯಕ್ಕೆ ಬಳಸಿದ್ದ ಡ್ರಾಗರ್ ಅನ್ನು ನರಸಿಂಹನ ಕಟ್ಟುತ್ತಿರುವ ಮನೆಯ ಸ್ಟೇರ್ ಕೇಸ್ ಕೆಳಗೆ ಬಿಸಾಕಿರುತ್ತೇನೆ. ಕರೆದುಕೊಂಡು ಹೋದರೆ ತೋರಿಸುತ್ತೇನೆ ಎಂದು ಹೇಳಿದ್ದರು. ಸಾಕ್ಷಿದಾರರು ಆರೋಪಿತನ ಸ್ವ ಇಚ್ಚಾ ಹೇಳಿಕೆಯನ್ನು ನೋಡಿ ಗುುರತಿಸಿದ್ದು ಅದನ್ನು ನಿಪಿ-*20* ಎಂದು ಆರೋಪಿತನ ಸಹಿಯನ್ನು ನಿಪಿ-*20(ಎ)* ಎಂದು ಗುರುತಿಸಲಾಯಿತು. ಕೃತ್ಯ ನಡೆದಂತಹ ವೇಳೆಯಲ್ಲಿ ಹಾಕಿದ್ದಂತಹ ಬಟ್ಟೆಗಳೇ ಇದ್ದುದರಿಂದ ಆ ಶರ್ಟ್, ಜೀನ್ಸ್ ಪ್ಯಾಂಟ್ , ಗ್ರೇ ಕಲರ್ ಮಾಸ್ಕ್ ಅನ್ನು ಪಂಚರ ಸಮಕ್ಷಮ ಠಾಣೆಯಲ್ಲಿಯೇ ಅಮಾನತ್ತು ಪಡಿಸಿಕೊಂಡಿದ್ದೆನು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*9* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*9(ಬಿ)* ಎಂದು ಗುರುತಿಸಲಾಯಿತು. ಆ ವೇಳೆಯಲ್ಲಿ ಪಂಚರಾಗಿ ಗೌತಮ್ ಮತ್ತು ವಿನೋದ್ ರವರು ಇದ್ದರು. ಪಂಚರಿಗೆ ನೊಟೀಸ್ ಅನ್ನು

ಕೊಟ್ಟು ಕರೆಸಿದ್ದೆನು. ಸಾಕ್ಷಿದಾರರು ನೋಟೀಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*21* ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ-*21(ಎ)* ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಫೋಟೋಗಳನ್ನು ಸಹ ತೆಗೆಸಿದ್ದೆ. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-*10* ಮತ್ತು *11* ಅಂತ ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಶರ್ಟ್, ಜೀನ್ಸ್ ಪ್ಯಾಂಟ್ , ಗ್ರೇ ಕಲರ್ ಮಾಸ್ಕ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ-*3* ರಿಂದ *5* ಅಂತ ಗುರುತಿಸಲ್ಪಟ್ಟಿರುತ್ತವೆ.

ದಿನಾಂಕ *16.03.2023* ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಿರ್ಯಾದುದಾರರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿದ್ದೆನು. ಆ ವೇಳೆಯಲ್ಲಿ ಪಂಚರಾಗಿ ಅಮೃತ್ ಮತ್ತು ನಂಜುಂಡಸ್ವಾಮಿ ಇದ್ದರು. ಪಿರ್ಯಾದುದಾರರು ಕೃತ್ಯ ನಡೆದ ಸಂದರ್ಭದಲ್ಲಿ ಹಾಕಿಕೊಂಡಿದ್ದ ***puma*** ಕಂಪನಿಯ ಟೀಶರ್ಟ್ ಅನ್ನು ಹಾಜರುಪಡಿಸಿದ್ದರು. ಅದನ್ನು ವಶಕ್ಕೆ ಪಡೆದುಕೊಂಡಿದ್ದೆ. ನಾನು ಆ ಟೀಶರ್ಟ್ ಅನ್ನು ಒಂದು ಬಿಳಿ ಚೀಲದಲ್ಲಿ ಹಾಕಿ ಎಸ್ ಎನ್ನುವ ಅಕ್ಷರದಿಂದ ಸೀಲು ಮಾಡಿದ್ದೆನು. ಸಾಕ್ಷಿದಾರರು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ. *4* ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ. *4(ಸಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಹಜರ್ ಕಾಲದಲ್ಲಿ ತೆಗೆದ *2* ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-*5* ಮತ್ತು *6* ಎಂದು ಗುರುತಿಸಲ್ಪಟ್ಟಿರುತ್ತವೆ. ಮಹಜರ್

ಸಮಯದಲ್ಲಿ ಪಂಚರಿಗೆ ನೋಟೀಸ್ ಅನ್ನು ಕೊಟ್ಟಿದ್ದೆ. ಸಾಕ್ಷಿದಾರರು ನೋಟೀಸ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*22* ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ. *22 (*ಎ*)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪಿರ್ಯಾದುದಾರರ ಶರ್ಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ–*1* ಎಂದು ಗುರುತಿಸಲ್ಪಟ್ಟಿರುತ್ತವೆ.

ಆರೋಪಿತನು ಡ್ರಾಗರ್ ಬಿಸಾಕಿದ್ದ ಸ್ಥಳವಾದ ನರಸಿಂಹನ ಕಟ್ಟುತ್ತಿರುವಂತಹ ಮನೆಯ ಕಟ್ಟಡಕ್ಕೆ ಕರೆದುಕೊಂಡು ಹೋಗಿದ್ದು ಜೊತೆಯಲ್ಲಿ ಪಂಚರಾದ ಅಮೃತ ಮತ್ತು ನಂಜುಂಡಸ್ವಾಮಿ ಇದ್ದರು. ಆರೋಪಿತನು ಕೃತ್ಯಕ್ಕೆ ಬಳಸಿದ್ದ ಡ್ರಾಗರ್ ಅನ್ನು ಎಸೆದಿದ್ದ ಸ್ಥಳ ವನ್ನು ತೋರಿಸಿ ಡ್ರಾಗರ್ ಅನ್ನು ಆರೋಪಿತನು ಎತ್ತಿಕೊಟ್ಟಿದ್ದ ಅದನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದೆನು. ಆ ಡ್ರಾಗರ್ ಅನ್ನು ಬಿಳಿ ಚೀಲದಲ್ಲಿ ಹಾಕಿ ಎಸ್ ಎಂಬ ಅರಗಿನಿಂದ ಸೀಲ್ ಮಾಡಿದ್ದೆನು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*13* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.*13 (*ಡಿ*)* ಎಂದು ಗುರುತಿಸಲಾಯಿತು. ಆ ವೇಳೆಯಲ್ಲಿ ನಮ್ಮ ಜೊತೆಯಲ್ಲಿ ನಮ್ಮ ಸಿಬ್ಬಂದಿಯವರಾದ ಶಿವರಾಜ್ ಮತ್ತು ಪ್ರಕಾಶ್ ಇದ್ದರು. ಸಾಕ್ಷಿದಾರರು ಡ್ರಾಗರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ–*2* ಎಂದು ಗುರುತಿಸಲ್ಪಟ್ಟಿರುತ್ತದೆ. ಮಹಜರ್ ಸಮಯದಲ್ಲಿ ಫೋಟೋ ತೆಗೆದಿದ್ದೆ. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–*14* ರಿಂದ *16* ಎಂದು ಗುರುತಿಸಲ್ಪಟ್ಟಿರುತ್ತವೆ. ಆರೋಪಿತನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ಅಮಾನತ್ತು ಪಡಿಸಿಕೊಂಡ ವಸ್ತುಗಳ ಬಗ್ಗೆ ಮಾಲು ಪಟ್ಟಿ

ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು ಮತ್ತು ಆ ವಸ್ತುಗಳನ್ನು ***FSL*** ವರದಿ ಬರುವವರೆಗೆ ಠಾಣೆಯಲ್ಲಿ ಇಟ್ಟುಕೊಳ್ಳಲು ಅನುಮತಿ ಕೋರಿದ್ದೆನು.

ಕೃತ್ಯ ನಡೆದ ಸ್ಥಳ ಮತ್ತು ಚಾಕು ಎಸೆದಂತಹ ಸ್ಥಳ ಗಳ ಬಗ್ಗೆ ಕಚ್ಚಾ ನಕಾಶೆ ತಯಾರಿಸಿ ಕೊಡಲು ಲೋಕೋಪಯೋಗಿ ಇಲಾಖೆಯವರಿಗೆ ಮನವಿ ಮಾಡಿಕೊಂಡಿದ್ದೆನು. ಮತ್ತು ಕೃತ್ಯ ನಡೆದ ಸಮಯದಲ್ಲಿ ಕೃತ್ಯ ನಡೆದ ಸ್ಥಳ ದಲ್ಲಿ ವಿದ್ಯುಚಕ್ತಿ ಇತ್ತೊ ಅಥವಾ ಇಲ್ಲವೋ ಎನ್ನುವ ಬಗ್ಗೆ ಮಾಹಿತಿ ನೀಡುವಂತೆ ಚೆಸ್ಕಾಂ ರವರಿಗೆ ಮನವಿ ಮಾಡಿಕೊಂಡಿದ್ದೆ.

ಅಮಾನತ್ತು ಪಡಿಸಿಕೊಂಡಿದ್ದ ಡ್ರಾಗರ್ ಮತ್ತು ಪಿರ್ಯಾದುದಾರರ ಶರ್ಟ್ ಮೇಲೆ ಇದ್ದಂತಹ ರಕ್ತದ ಕಲೆಗಳನ್ನು ಪರೀಕ್ಷಿಸಿ ಆ ರಕ್ತದ ಕಲೆಗಳು ಯಾವ ಗುಂಪಿಗೆ ಸೇರುತ್ತವೆ ಎಂದು ತಿಳಿಸುವಂತೆ ***RFSL*** ಗೆ ಮನವಿ ಮಾಡಿಕೊಂಡಿದ್ದೆನು. ಕೃತ್ಯಕ್ಕೆ ಬಳಸಿದ್ದ ಡ್ರಾಗರ್ ಅನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಯ ವೈದ್ಯರಿಗೆ ಕಳುಹಿಸಿ ಪಿರ್ಯಾದಿಗೆ ಆಗಿರುವ ಗಾಯ ಆ ಚಾಕುವಿನಿಂದ ಹಲ್ಲೆ ಮಾಡಿದರೆ ಆಗಬಹುದಾ ಎಂದು ಅಭಿಪ್ರಾಯವನ್ನು ಕೋರಿದ್ದೆ. ಸಾಕ್ಷಿದಾರರು ವೈದ್ಯರಿಗೆ ಬರೆದಂತಹ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*23* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ.*23(ಎ)* ಎಂದು ಗುರುತಿಸಲಾಯಿತು. ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಬರೆದಂತಹ ಲಿಖಿತ ಮನವಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*24* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *24(ಎ)* ಎಂದು ಗುರುತಿಸಲಾಯಿತು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದವರು ನೀಡಿದಂತಹ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*25* ಎಂದು

ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *25(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸಹಾಯಕ ಕಾರ್ಯಪಾಲಕ ಅಭಿಯಂತರರು ಮೈಸೂರ್ ರವರಿಗೆ ನೀಡಿದಂತಹ ಲಿಖಿತ ಮನವಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*26* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *26(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸಹಾಯಕ ಕಾರ್ಯಪಾಲಕ ಅಭಿಯಂತರರು ಮೈಸೂರ್ ರವರು ಕೊಟ್ಟಂತಹ ಸ್ಕೆಚ್ ಗಳನ್ನು ಮತ್ತು ಲಿಖಿತ ಮಾಹಿತಿಯನ್ನು ನೋಡಿ ಗುರುತಿಸಿದ್ದು ಲಿಖಿತ ಮಾಹಿತಿಯನ್ನು ನಿಪಿ-*27* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*27(ಎ)* ಎಂದು ಗುರುತಿಸಲಾಯಿತು. *2* ನಕಾಶೆಗಳನ್ನು ಈಗಾಗಲೇ ನಿಪಿ-*1* ಮತ್ತು *2* ಎಂದು ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿದಾರರ ಸಹಿಗಳನ್ನು ನಿಪಿ-*1(ಬಿ)* ಮತ್ತು ನಿಪಿ-*2(ಬಿ)* ಎಂದು ಗುರುತಿಸಲಾಯಿತು.

ದಿನಾಂಕ *16.03.2023* ರಂದು ಡಿ. ನಾಗೇಶ್ ಬಿನ್ ದೊರೆಸ್ವಾಮಿ ಗೌಡ , ಚೇತನ್ ಬಿನ್ ನಾಗೇಶ್ , ಜಿ ಪ್ರಕಾಶ್ ಸಿಪಿಸಿ *559,* ಶಿವರಾಜು ಸಿಪಿಸಿ *53* ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

ದಿನಾಂಕ *17.03.2023* ರಂದು ಸಾಕ್ಷಿದಾರರಾದ ಅಮರ್ ಬಿನ್ ಮಂಚೇಗೌಡ, ಸಂಜಯ್ ಬಿನ್ ಮಹದೇವ, ದೊರೆಸ್ವಾಮಿ ಬಿನ್ ರಮೇಶ್, ಮದನ್ ಕುಮಾರ್ ಎಸ್.ಎಂ ಬಿನ್ ಶೇಖರ್ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

ದಿನಾಂಕ *28.03.2023* ರಂದು ಶಿವಕುಮಾರ್ ಸಿಪಿಸಿ *343* ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು.

ಸಾಕ್ಷಿ ನಾಗೇಶ್ ರವರು ನಿಪಿ–*12* ರಂತೆ ನನ್ನ ಮುಂದೆ ಸಾಕ್ಷಿ ಹೇಳಿಕೆಯನ್ನು ಕೊಟ್ಟಿದ್ದರು.

ದಿನಾಂಕ *26.04.2023* ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುಸಿದ್ದು, ಅದನ್ನು ಈಗಾಗಲೇ ನಿಪಿ. *7* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ. *7(ಬಿ)* ಎಂದು ಗುರುತಿಸಲಾಯಿತು.

ದಿನಾಂಕ *04.05.2023* ರಂದು ವೈದ್ಯರಿಂದ ಅಭಿಪ್ರಾಯದ ವರದಿಯನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು ವೈದ್ಯರು ಕೊಟ್ಟಂತಹ ಅಭಿಪ್ರಾಯದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*8* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ. *8(ಬಿ)* ಎಂದು ಗುರುತಿಸಲಾಯಿತು.

ದಿನಾಂಕ *23.04.2023* ರಂದು ***FSL*** ವರದಿ ಪಡೆದುಕೊಂಡಿದ್ದೆನು. ಸಾಕ್ಷಿದಾರರು ***FSL*** ವರದಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *17* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ. *17 (ಬಿ)* ಎಂದು ಗುರುತಿಸಲಾಯಿತು.

ನಾನು ಹೆಬ್ಬಾಳು ಪೊಲೀಸ್ ಠಾಣೆಯಿಂದ ಈ ಹಿಂದೆ ಆರೋಪಿತನ ವಿರುದ್ಧ ಪ್ರಕರಣ ದಾಖಲಾಗಿದ್ದು ಆ ಪ್ರಕರಣದಲ್ಲಿನ ದೋಷರೋಪಣಾ ಪತ್ರವನ್ನು ಪಡೆದುಕೊಂಡಿದ್ದೆನು.

ಮದನ್ ಕುಮಾರ್ ಎಂಬುವವರ ಆಟೋದ ಬಗ್ಗೆ ***xerox*** ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ.

ವೈದ್ಯರ ಕಡೆಯಿಂದ ಪಿರ್ಯಾದುದಾರರ ರಕ್ತದ ಗುಂಪಿನ ಬಗ್ಗೆ ದಾಖಲೆ ಪಡೆದುಕೊಂಡಿದ್ದೆನು. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.

*28* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ.*28(ಎ)* ಎಂದು ಗುರುತಿಸಲಾಯಿತು. ಸ್ಥಳ ದಲ್ಲಿ ನನ್ನ ಸ್ವಂತ ಮೊಬೈಲ್ ನಲ್ಲಿ ತನಿಖಾ ಸಹಾಯಕರಾದ ಮಧು ಎಂಬುವವರ ಕಡೆಯಿಂದ ಫೋಟೋ ತೆಗೆಸಿದ್ದೆ. ಈ ಬಗ್ಗೆ ನಾನು *65*–ಬಿ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿದಾರರು *65*–ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*29* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ.*29(ಎ)* ಎಂದು ಗುರುತಿಸಲಾಯಿತು. ಮೊಬೈಲ್ ನಲ್ಲಿ ಇದ್ದಂತಹ ಫೋಟೋಗಳನ್ನು ಠಾಣೆಯಲ್ಲಿರುವ ಕಂಪ್ಯೂಟರ್ ಗೆ ವರ್ಗಾಯಿಸಿಕೊಂಡು ಆ ನಂತರ ಬಸವನಗುಡಿ ಸರ್ಕಲ್ ನಲ್ಲಿ ಇರುವ ಮಂಜು ಫೋಟೋ ಸ್ಟುಡಿಯೋ ದವರ ಕಡೆಯಿಂದ ಕಲರ್ ಪ್ರಿಂಟರ್ ಅನ್ನು ತರಿಸಿಕೊಂಡು ಫೋಟೋಗಳನ್ನು ಪ್ರಿಂಟ್ ತೆಗೆದಿದ್ದೆ.

ತನಿಖೆ ಪೂರ್ಣಗೊಂಡ ಮೇಲೆ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದೆನ್ನು. ಆರೋಪಿತನನ್ನು ವಶಕ್ಕೆ ಪಡೆದುಕೊಂಡು ಆತನ ಸ್ವ–ಇಚ್ಛಾ ಹೇಳಿಕೆಯನ್ನು ಪಡೆದುಕೊಂಡ ಆರೋಪಿತನೇ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಇರುತ್ತಾನೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದ** :

ನಾನು ದೂರನ್ನು ಪಡೆದುಕೊಂಡ ಮೇಲೆ ಆ ದೂರಿನಲ್ಲಿ ಏನು ಬರೆದಿರುತ್ತದೆ ಎನ್ನುವ ಬಗ್ಗೆ ಗಮನಿಸಿರುತ್ತೇನೆ. ಪಿರ್ಯಾದುದಾರರು ಆ ದಿನ ಸುಸ್ಥಿತಿಯಲ್ಲಿ ಇದ್ದರು. ಪಿರ್ಯಾದುದಾರರು ಠಾಣೆಗೆ ಬಂದಾಗ ಗಾಯಗಳನ್ನು ನೋಡಿದ್ದೆ ಆದರೆ ಯಾವ ಪ್ರಮಾಣದಲ್ಲಿ ಗಾಯಗಳು ಆಗಿವೆ ಎಂದು ನೋಡಿರುವುದಿಲ್ಲ. ಗಾಯಗಳು 2 ಕಡೆ ಆಗಿದ್ದವು. ನಾನು ಈಗ

ನೋಡುತ್ತಿರುವ ನಿಪಿ–3 ರಲ್ಲಿ ಎಡ ಬುಜ ಕ್ಕೆ ಆದಂತಹ ಗಾಯವನ್ನು ಹೊರತುಪಡಿಸಿ ಬೇರೆ ಗಾಯಗಳ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ದೂರಿನಲ್ಲಿ ಗಾಯಾಳು ಎಷ್ಟು ಗಂಟೆಗೆ ಆಸ್ಪತ್ರೆಗೆ ಹೋಗಿದ್ದರು ಮತ್ತು ಎಷ್ಟು ಗಂಟೆಗೆ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ನಾನು ಈಗ ನೋಡುತ್ತಿರುವ ದೂರಿನಲ್ಲಿ ಪಿರ್ಯಾದುದಾರರು ತನ್ನ ಹೇಳಿಕೆಯಲ್ಲಿ ಹೇಳಿದಂತೆ ಹೊಡೆದಂತಹ ವ್ಯಕ್ತಿಯನ್ನು ಪಿರ್ಯಾದುದಾರರು ಹಿಂಬಾಲಿಸಿಕೊಂಡು ಹೋಗಿದ್ದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಪಿರ್ಯಾದುದಾರರ ಅಣ್ಣ ಚೇತನ್ ಆ ದಿನ ಮನೆಯಲ್ಲಿ ಇದ್ದರೋ ಅಥವಾ ಹೊರಗಡೆ ಇದ್ದರೋ ಎನ್ನುವ ಬಗ್ಗೆ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಪಿರ್ಯಾದುದಾರರ ಹೇಳಿಕೆಯ ಪ್ರಕಾರ ಪಿರ್ಯಾದುದಾರರು ಮನೆಯಿಂದ ಆಸ್ಪತ್ರೆಗೆ ಹೋದ ರೀತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಎಷ್ಟು ಗಂಟೆಗೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದರು ಎಂದು ಹೇಳಿರುವುದಿಲ್ಲ. ಪಿರ್ಯಾದುದಾರರನ್ನು ಯಾವುದರಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ದೂರಿನಲ್ಲಿ ಹೇಳಿರಲಿಲ್ಲ ಎಂದರೆ ಸರಿ. ದಿನಾಂಕ 15.03.2023 ರಂದು ರಾತ್ರಿ 10.00 ರಿಂದ 10.30 ಗಂಟೆ ಸಮಯದಲ್ಲಿ ಆರೋಪಿತನನ್ನು ನಾನು ದಸ್ತಗಿರಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಸಹಿಯನ್ನು ಖಾಲಿ ಹಾಳೆಗೆ ತೆಗೆದುಕೊಂಡು ಆ ನಂತರ ಸ್ವ ಇಚ್ಛಾ ಹೇಳಿಕೆಯನ್ನಾಗಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ತೆಗೆದುಕೊಂಡಿತ್ತು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಪಂಚರಿಗೆ ಎಷ್ಟು ಗಂಟೆಯಲ್ಲಿ ನೊಟೀಸ್ ಕೊಟ್ಟಿತ್ತು ಎಂದು

ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಮತ್ತು ಆ ಪಂಚರು ಎಲ್ಲಿ ಇದ್ದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಗೌತಮ್ ಮತ್ತು ವಿನೋದ್ ರವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಮತ್ತು ಮಹಜರ್ ಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಅವರುಗಳು ಪಿರ್ಯಾದುದಾರರ ಸ್ನೇಹಿತರು ಇರುತ್ತಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ನಮ್ಮ ಠಾಣೆಯಿಂದ ಗೌತಮ್ ಮತ್ತು ವಿನೋದ್ ರವರ ಊರಿಗೆ ಸುಮಾರು 20 ಕಿ.ಮೀಟರ್ ಅಂತರ ಇರುತ್ತದೆ ಎಂದರೆ ಸರಿ. ಗೌತಮ್ ಮತ್ತು ವಿನೋದ್ ರವರು ಎಲ್ಲಿ ಇದ್ದಾಗ ಅವರಿಗೆ ನೋಟೀಸ್ ಕೊಟ್ಟಿದ್ದೆವು ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಎಂ.ಓ–3 ರಂತಹ ಬಟ್ಟೆ ಸಾಮಾನ್ಯವಾಗಿ ಬಟ್ಟೆ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಎಂ.ಓ–5 ರಂತಹ ಮಾಸ್ಕ್ ಗಳು ಸಾಮಾನ್ಯವಾಗಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಎಂ.ಓ–3 ಯಾವ ಕಂಪನಿಯ ಟೀಶರ್ಟ್ ಎಂದು ಪಂಚನಾಮೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಎಂ.ಓ–4 ಜೀನ್ಸ್ ಪ್ಯಾಂಟ್ ಯಾವ ಕಂಪನಿಗೆ ಸೇರಿದಂತಹ ಜೀನ್ಸ್ ಪ್ಯಾಂಟ್ ಇರುತ್ತದೆ ಎಂದು ಪಂಚನಾಮೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಟೀಶರ್ಟ್ ನ ಸಂಪೂರ್ಣ ಬಣ್ಣವನ್ನು ಪಂಚನಾಮೆಯಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಜೀನ್ಸ್ ಪ್ಯಾಂಟ್ ನ ಸಂಪೂರ್ಣ ಬಣ್ಣವನ್ನು ಪಂಚನಾಮೆಯಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಎಂ.ಓ–3 ರಿಂದ 5 ಅನ್ನು ಅನ್ನು ನಾನು ಮತ್ತು ಪಿರ್ಯಾದುದಾರರು ಸೇರಿ ಈ ಪ್ರಕರಣಕ್ಕೋಸ್ಕರ ಸೃಷ್ಟಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ಕುಳಿತು ಪಂಚನಾಮೆಯನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಕ್ಕಪಕ್ಕದಲ್ಲಿ ದೊರಕುವ ವ್ಯಕ್ತಿಗಳನ್ನು ಪಂಚನಾಮೆಗೆ ಪಂಚರಾಗಿ ತೆಗೆದುಕೊಳ್ಳಲು

ಯಾವುದೇ ತೊಂದರೆ ಇರುವುದಿಲ್ಲ ಆ ದಿನ ಸಿಕ್ಕಂತಹ ವ್ಯಕ್ತಿಗಳನ್ನೇ ಪಂಚರಾಗಿ ತೆಗೆದುಕೊಂಡಿತ್ತು.

ದಿನಾಂಕ 16.03.2023 ರಂದು ನಾನು ಠಾಣೆಯಿಂದ ಆ ಸ್ಥಳ ಕ್ಕೆ ಹೋಗಿದ್ದೆನೋ ಅಥವಾ ಬೇರೆ ಕಡೆಯಿಂದ ಹೊರಟೆನೋ ಎಂದು ಪಂಚನಾಮೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ದಲ್ಲಿ ಸಾರ್ವಜನಿಕರಿಗೆ ಅಥವಾ ಅಕ್ಕಪಕ್ಕದಮನೆಯವರಿಗೆ ನೊಟೀಸ್ ಕೊಡಲು ಯಾವುದೇ ತೊಂದರೆ ಇರಲಿಲ್ಲ ಏಕೆಂದರೆ ಪಿರ್ಯಾದುದಾರರ ಮನೆ ಕೊನೆಯ ಭಾಗದಲ್ಲಿ ಇದ್ದು ಅಕ್ಕಪಕ್ಕದಲ್ಲಿ ಯಾವುದೇ ಮನೆ ಇರಲಿಲ್ಲ. ಅಮೃತ್ ಮತ್ತು ನಂಜುಂಡಸ್ವಾಮಿ ಪಿರ್ಯಾದುದಾರರ ಸ್ನೇಹಿತರು ಇರುತ್ತಾರೆ ಎಂದರೆ ಸರಿಯಲ್ಲ. ಪಂಚರಾದ ಅಮೃತ ಮತ್ತು ನಂಜುಂಡಸ್ವಾಮಿ ರವರ ವಾಸದ ವಿಳಾಸಕ್ಕೂ ಮತ್ತು ಪೊಲೀಸ್ ಠಾಣೆಗೂ 5-6 ಕಿ.ಮೀಟರ್ ಅಂತರ ಎಂದರೆ ಸರಿಯಲ್ಲ. 3 ಕಿ.ಮೀಟರ್ ಅಂತರ ಇರಬಹುದು. ಅವರಿಬ್ಬರು ಎಲ್ಲಿ ಇದ್ದರು ಎನ್ನುವ ಬಗ್ಗೆ ಪಂಚನಾಮೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ಟೀಶರ್ಟ್ ನ ಪೂರ್ಣ ಬಣ್ಣವನ್ನು ಪಂಚನಾಮೆಯಲ್ಲಿ ವಿವರಿಸಿಲ್ಲ ಎಂದರೆ ಸರಿ. ಟೀಶರ್ಟ್ ಅನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಟೀಶರ್ಟ್ ನಂತಹ ಟೀಶರ್ಟುಗಳು ಬಟ್ಟೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಘಟನಾ ಸ್ಥಳ ದಿಂದ ಕಟ್ಟುವ ಹಂತದಲ್ಲಿ ಇರುವ ನರಸಿಂಹ ರವರ ಮನೆಗೆ ಯಾವ ವಾಹನದಲ್ಲಿ ಯಾರು ಯಾರು ಹೋಗಿದ್ದೆವು ಎಂದು ಪಂಚನಾಮೆಯಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಮತ್ತು ಸಮಯವನ್ನು ಸಹ ಹೇಳಿರುವುದಿಲ್ಲ ಎಂದರೆ ಸರಿ. ಡ್ರಾಗನ್ ನಂತಹವುಗಳು ಗುಜರಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಡ್ರಾಗನ್ ನ ಆಕಾರಗಳ ಬಗ್ಗೆ ಪಂಚನಾಮೆಯಲ್ಲಿ ವಿವರವಾಗಿ ಹೇಳಿರುವುದಿಲ್ಲ ಎಂದರೆ ಸರಿ.

ನನಗೆ ನರಸಿಂಹ ರವರಿಗೆ ನೋಟೀಸ್ ಕೊಡಲು ಯಾವುದೇ ತೊಂದರೆ ಇರುವುದಿಲ್ಲ. ನರಸಿಂಹ ರವರನ್ನು ಸ್ಥಳ ಕ್ಕೆ ಕರೆಸುವ ಪ್ರಯತ್ನ ಮಾಡಿರಲಿಲ್ಲ. ನರಸಿಂಹ ರವರ ಮನೆ ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಮತ್ತು ಅವರ ಹೇಳಿಕೆ ಪಡೆದುಕೊಳ್ಳಲು ಯಾವುದೇ ತೊಂದರೆ ಇರುವುದಿಲ್ಲ. ಬೇರೆ ಸ್ಥಳ ಗಳಲ್ಲಿ ಕಟ್ಟುವ ಹಂತದಲ್ಲಿ ಇರುವ ಕಟ್ಟಡದ ಫೋಟೋವನ್ನು ನಾನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಡ್ರಾಗನ್ ತುಕ್ಕು ಹಿಡಿದಿತ್ತಾ ಅಥವಾ ಹೊಸದಾಗಿ ಇತ್ತಾ ಎಂದು ಪಂಚನಾಮೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಡ್ರಾಗನ್ ಮೇಲೆ ರಕ್ತ ಇದ್ದ ಬಗ್ಗೆ ಪಂಚನಾಮೆಯಲ್ಲಿ ಹೇಳಿರುವುದಿಲ್ಲ. ಚಾಕುವಿನ ಮೇಲೆ ಏನಾದರು ಮಣ್ಣು ಬಿದಿತ್ತಾ ನೀರು ಬಿದ್ದು ಹಾಳಾಗಿತ್ತಾ ಎಂದು ಪಂಚನಾಮೆಯಲ್ಲಿ ಹೇಳಿರಲಿಲ್ಲ ಎಂದರೆ ಸರಿ. ಡ್ರಾಗನ್ ಅನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. FSL ವರದಿಯನ್ನು ನನ್ನ ಹೇಳಿಕೆಯ ಮೇಲೆ ತಯಾರು ಮಾಡಿ ಕೊಟ್ಟಿರುತ್ತದೆ ಎಂದರೆ ಸರಿಯಲ್ಲ. FSL ವರದಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ನಕಾಶೆಗಳನ್ನೆಲ್ಲಾ ಠಾಣೆಯಲ್ಲಿ ಯೇ ಕುಳಿತು ತಯಾರು ಮಾಡಿದಂತಹ ನಕಾಶೆಗಳು ಎಂದರೆ ಸರಿಯಲ್ಲ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಲಿಖಿತ ಮನವಿ ಸಲ್ಲಿಸಿದ್ದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 16.03.2023 ರಂದು ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡೆ ಎಂದು ಹೇಳಿದ್ದು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಪಡೆದುಕೊಂಡಿದ್ದೆ ಎಂದು ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ನಾನು ಹೇಳಿಕೆಗಳನ್ನು ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿಕೊಂಡಂತಹ ಹೇಳಿಕೆಗಳು ಇರುತ್ತವೆ ಎಂದರೆ

ಸರಿಯಲ್ಲ.

ನನ್ನ ಹೇಳಿಕೆಯ ಮೇರೆಗೆ ವೈದ್ಯರು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಆರೋಪಿತನ ಮೇಲೆ ಇದ್ದಂತಹ ಹಳೇ ವೈಷಮ್ಯದ ಮೇಲೆ ದೂರನ್ನು ಕೊಟ್ಟಿದ್ದು ದೂರಿನಲ್ಲಿ ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಈ ಹಿಂದೆ ಆರೋಪಿತನು ಅಲ್ಪ ವಯಿ ಇದ್ದಾಗ ಹಾಕಿದಂತಹ ಪ್ರಕರಣ ಇದ್ದು ಆ ಪ್ರಕರಣದಲ್ಲಿ ನ್ಯಾಯಾಲಯವು ಆತನಿಗೆ ಎಚ್ಚರಿಕೆ ನೀಡಿ ಬಿಡುಗಡೆ ಮಾಡಬಹುದು ಮತ್ತು ಆತನನ್ನು ಬಿಡುಗಡೆ ಮಾಡಬಹುದು ಎನ್ನುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತದೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧವಾಗಿ ನನ್ನ ತನಿಖಾ ಸಮಯದಲ್ಲಿ ಯಾವುದೇ ಸಾಕ್ಷಾದಾರಗಳು ಇರುವುದಿಲ್ಲ ಎಂದು ಗೊತ್ತಾದರೂ ಸಹ ಪಿರ್ಯಾದುದಾರರ ಮಾತನ್ನು ಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಾದ ಚಂದನ್ ನಮ್ಮ ಠಾಣೆಯ ಬಾದ್ಮಿದಾರನಾಗಿ ಕೆಲಸ ಮಾಡುತ್ತಿರುತ್ತಾನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.